

# ಪ್ರೊಟೀನುರಿಯಾ

## ಕಿಡ್ನಿ ಕಾಯಿಲೆಯ ಮುನ್ಸೂಚನೆ

**ಮೂತ್ರದಲ್ಲಿ ಪ್ರೊಟೀನ್ ಸೋರಿಕೆಯಾದರೆ ಅದು ಮೂತ್ರಪಿಂಡ ಸಮಸ್ಯೆ ಆರಂಭದ ಲಕ್ಷಣ. ಅನಿಯಂತ್ರಿತ ಮಧುಮೇಹದಿಂದ ಮೂತ್ರದಲ್ಲಿ ಪ್ರೊಟೀನ್ ಹೆಚ್ಚುವರಿಯಾಗಿ ಹೋಗುತ್ತದೆ. ರಕ್ತಪರೀಕ್ಷೆ, ಯೂರಿನ್ ಪರೀಕ್ಷೆ ಮೂಲಕ ಇದನ್ನು ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು.**

**■ ಉಮಾ ಅನಂತ್**

ಐವತ್ತು ವರ್ಷದ ರಾಮರಾವ್‌ಗೆ ಸುಮಾರು ಹತ್ತು ವರ್ಷಗಳಿಂದ ಮಧುಮೇಹ. ಅದು ಕೂಡ ಅನಿಯಂತ್ರಿತವಾಗಿ ಇದ್ದುದರಿಂದ ಬೆಳಿಗ್ಗೆ ಎದ್ದಾಗ ಕಣ್ಣು ಮಂಜು ಮಂಜಾದಂತೆ ಅನಿಸುತ್ತಿತ್ತು. ಮೂತ್ರ ಮಾಡಲು ತೊಡಗಿದರೆ ಉರಿ ಉರಿಯಾದ ಅನುಭವ, ಜೊತೆಗೆ ಮೂತ್ರ ನೊರೆ ನೊರೆಯಾಗಿ ಹೋಗುತ್ತಿತ್ತು.

ಮೂತ್ರದ ಸಮಸ್ಯೆಗೆ ಮೂತ್ರಪಿಂಡ ತಜ್ಞರನ್ನು ಸಂಪರ್ಕಿಸಿದ ರಾಮರಾಯರಿಗೆ ತಿಳಿದದ್ದು ಮೂತ್ರದಲ್ಲಿ ನೊರೆಯಾಗುವುದು ಕಿಡ್ನಿ ಸಮಸ್ಯೆ ಶುರುವಾಗುತ್ತಿದೆ ಎಂಬುದರ ಮುನ್ಸೂಚನೆ ಎಂಬುದು.

ವೈದ್ಯಕೀಯ ಪರಿಭಾಷೆಯಲ್ಲಿ 'ಪ್ರೊಟೀನುರಿಯಾ' ಎಂದು ಕರೆಯಲಾಗುವ ಈ ಸಮಸ್ಯೆ ಮುಂದೆ ಗಂಭೀರವಾದ ಕಿಡ್ನಿ ತೊಂದರೆಗೆ ಕಾರಣವಾಗಬಹುದು. ಹೀಗಾಗಿ ಮುಂಜಾಗ್ರತೆ ವಹಿಸಲೇಬೇಕು.

### ಏನಿದು ಪ್ರೊಟೀನುರಿಯಾ?

'ಪ್ರೊಟೀನುರಿಯಾ ಎಂದರೆ ಮೂತ್ರದಲ್ಲಿ ಹೆಚ್ಚುವರಿ ಪ್ರೊಟೀನ್ ಹೊರಹರಿವು ಆಗುವುದು. ಇದು ಮೂತ್ರಪಿಂಡದ ಹಾನಿಯ ಮುನ್ಸೂಚನೆಯೇ ಆಗಿದೆ. ಮೂತ್ರದಲ್ಲಿ ಪ್ರೊಟೀನ್ ಸೋರಿಕೆಯಾಗುವುದು ಗೊತ್ತಾದ ಕೂಡಲೇ ಚಿಕಿತ್ಸೆ ಪಡೆಯದೇ ಇದ್ದರೆ ಮೂತ್ರಪಿಂಡಕ್ಕೆ ಹಾನಿಯಾಗುವ ಸಾಧ್ಯತೆ ಹೆಚ್ಚು. ಕಿಡ್ನಿಗೆ ತೊಂದರೆ ಆದರೆ ಇದರಿಂದ ರಕ್ತ ಶುದ್ಧೀಕರಣಕ್ಕೆ ಅಡಚಣೆಯಾಗುತ್ತದೆ' ಎಂದು ಮಾಹಿತಿ ನೀಡುತ್ತಾರೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ನೆಫ್ರೋ ಯುರಾಲಜಿ ಸಂಸ್ಥೆಯಲ್ಲಿ ಮೂತ್ರಪಿಂಡ ತಜ್ಞರಾಗಿರುವ ಡಾ. ಶ್ರೀಧರ್ ಸಿ.ಜಿ. ಅವರು.

ಇದೇ ರೀತಿ ದೇಹದ ಸಮರ್ಪಕ ಕಾರ್ಯನಿರ್ವಹಣೆಗೆ ಅಲ್ಬುಮಿನ್ ಅಗತ್ಯ. ಇದು ಕಿಡ್ನಿ ಕಾಯಿಲೆಯನ್ನು ಗುರುತಿಸಲು ಸಹಾಯ ಮಾಡುತ್ತದೆ. ಸೀರಮ್ ಅಲ್ಬುಮಿನ್ ಯಕೃತ್ತಿನಿಂದ ಉತ್ಪತ್ತಿಯಾಗುತ್ತದೆ, ರಕ್ತನಾಳಗಳು ಮತ್ತು ದೇಹದ ಅಂಗಾಂಶಗಳ ನಡುವೆ ದೇಹದ ದ್ರವಗಳ ಸರಿಯಾದ ವಿತರಣೆಗೆ ಅಗತ್ಯವಿರುವ ಆನ್ಕೊಟಿಕ್ ಒತ್ತಡವನ್ನು ನಿರ್ವಹಿಸಲೂ ಅಲ್ಬುಮಿನ್ ಅಗತ್ಯ. ಸೀರಮ್ ಅಲ್ಬುಮಿನ್ ಕಡಿಮೆಯಾದರೆ ಕಿಡ್ನಿಗೆ ಹಾನಿ ಮಾಡಬಹುದು.

'ಮೂತ್ರದಲ್ಲಿನ ಪ್ರೊಟೀನ್ ಸೋರಿಕೆಯನ್ನು ಕೆಲವು ಲಕ್ಷಣಗಳ ಮೂಲಕ ಪತ್ತೆ ಹಚ್ಚಬಹುದು' ಎನ್ನುವ ಅವರು ಈ ಸಮಸ್ಯೆಯ ರೋಗ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡುತ್ತಾರೆ.

- ಮೂತ್ರದಲ್ಲಿ ನೊರೆ
- ಕೈಗಳು, ಕಾಲುಗಳು ಅಥವಾ ಮುಖದಲ್ಲಿ ಊತ
- ಆಯಾಸ, ನಿತ್ರಾಣವಾದ ಪರಿಸ್ಥಿತಿ
- ಹೊಟ್ಟೆನೋವು
- ಅಧಿಕ ರಕ್ತದೊತ್ತಡ
- ತೂಕ ಹೆಚ್ಚಳ